(6) ವಿತ್ತೀಯ ಕಾರ್ಯ ಕಲಾಪಗಳು

ಪೂರಕ ಅಂದಾಜುಗಳು (ಎರಡನೇ ಕಂತು) 1996-97 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 1996-97ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಕಂತು) ಅನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

"1996-97 ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಕಂತು) ಅನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಉಪಾಧ್ಯಕ್ಷರು: ಈ ಸಭೆಯನ್ನು ಮುಂದೂಡಿ ಪುನಃ ಮಧ್ಯಾಹ್ನ ಹಲವಾರು ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ ಒಂದು ಗಂಟೆ ನಲವತ್ತೇಳು ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ ಮೂರು ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು 3-10 ಕ್ಕೆ ಮತ್ತೆ ಸಮಾವೇಶಗೊಂಡಿತು ಅಧ್ಯಕ್ಷತೆಯನ್ನು ಮಾನ್ಯ ಉಪಾಧ್ಯಕ್ಷರು ವಹಿಸಿದ್ದರು.

ಶ್ರೀ ಹೆಚ್.ಸಿ ಬಾಲಕೃಷ್ಣ: ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಚಾರದ ಬಗ್ಗೆ ಮಂತ್ರಿಗಳಿಂದ ಹೇಳಿಕೆಯನ್ನು ಕೊಡಿಸಬೇಕು.

ಉಪಾಧ್ಯಕ್ಷರು: ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ನಾಳೆ ಕೊಡುತ್ತಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮುಖ್ಯಮಂತ್ರಿಗಳು ಇಲ್ಲ.

ಶ್ರೀ ಸಿ. ಬೈರೇಗೌಡ: ತಾವು ಪ್ರಾರಂಭ ಮಾಡಿ ಮಾನ್ಯ ಮಂತ್ರಿಗಳು ಬರುತ್ತಾರೆ ಅವರಿಗೆ ತಿಳಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ವಿರೋಧ ಪಕ್ಷದ ನಾಯಕರು ಭಾಷಣ ಮಾಡುವುದಕ್ಕೆ ಎದ್ದಾಗ ಅಲ್ಲಿ 10 ಜನ ಇದ್ದಾರೆ. 7 ಜನ ಮಂತ್ರಿಗಳು ಇದ್ದಾರೆ ಮೂವರು ಶಾಸಕರು ಇದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ. ಹಿರಿಯ ಅಧಿಕಾರಿಗಳು, ಐ.ಎ.ಎಸ್ ಅಧಿಕಾರಿಗಳು ಇಲ್ಲ. ಇದು ಸಭೆಯೇ? ಏತಕ್ಕೋಸ್ಕರ ಸಭೆಯನ್ನು ನಡೆಸಬೇಕು? ರಾಜ್ಯಪಾಲರ ಭಾಷಣದ ಬಗ್ಗೆ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಆರಂಭ ಮಾಡುವಾಗ

ಬಹಳಷ್ಟು ಎಚ್ಚರಿಕೆಯಿಂದ ಸರಕಾರ ಇರಬೇಕು. ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಉಪ ಮುಖ್ಯ ಮಂತ್ರಿಗಳು ಇಲ್ಲ. ಮಾನ್ಯ ಸಿಂಧ್ಯಾರವರೇ, ತಾವು ಈ ಕಡೆ ಇದ್ದಾಗ ತಾವು ಏನು ಮಾಡುತ್ತಿದ್ದೀರಿ ಅದನ್ನು ಹೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಿಂಧ್ಯರವರೆಲ್ಲ ತಾವು ಉಪ ನಾಯಕರಾಗಿದ್ದಾಗ ಎಷ್ಟು ಸಲ ಹೇಳಿದ್ದೀರಿ ದಯವಿಟ್ಟು ಕಡತವನ್ನು ನೋಡಿ ಹೇಳಿ. ಸಭೆ ನಡೆಸುವುದು ಬೇಕಾಗಿಲ್ಲ ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆ ಸ್ಥಾನದಲ್ಲಿ ತಾವು ಕುಳಿತಾಗ ಕಳೆದ ವಾರ ತಾವೇ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದೀರಿ ಈಗಲೂ ಯಾರೂ ಇಲ್ಲ.

ಶ್ರೀ ಸಿ. ಬೈರೇಗೌಡ: ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಲಿದ್ದಾರೆಂದು ತಾವು ಬರಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಿದ್ದೇವೆ. ಅವರು ಬರುವವರಿದ್ದಾರೆ. ಅವರು ಪ್ರಾರಂಭ ಮಾಡಲಿ.

(ಗೊಂದಲ)

ಶ್ರೀ ಯು. ಆರ್. ಸಭಾಪತಿ: ಹೊಸ ಸಂಪ್ರದಾಯ ಬೇಡ. ಅಧಿಕಾರಿಗಳೂ ಕೂಡ ಯಾರೂ ಇಲ್ಲ.

ಶ್ರೀ ಸಿ ಬೈರೇಗೌಡ: ಇದೊಂದು ಸಂಪ್ರದಾಯ ಬೇಡ. ಅಧಿಕಾರಿಗಳು ಇರತಕ್ಕಂಥಾದ್ದು ಸರಕಾರದಲ್ಲಿರುವ ಮಂತ್ರಿಗಳಿಗೆ ಸಹಕಾರ ಕೊಡುವುದಕ್ಕೆ ಅಧಿಕಾರಿಗಳು. They are not part of this House. ಅಲ್ಲ ಆದ್ದರಿಂದ ಇದೊಂದು ಕೆಟ್ಟ ಸಂಪ್ರದಾಯವನ್ನು ಸದನದಲ್ಲಿ ಹಾಕುವುದು ಬೇಕಾಗಿಲ್ಲ. ಆದರೂ ಇರಬೇಕು. ಅವರು ಇರುವುದನ್ನು ನಾನೂ ಒಪ್ಪುತ್ತೇನೆ. ನಮ್ಮ ರೂಲ್ಸ್ ಆಫ್ ಬಿಜಿನೆಸ್‌ನಲ್ಲಿ ಎಲ್ಲಿ ಇದೆ ಹೇಳಿ ನೋಡೋಣ. ಇದು ಕೆಟ್ಟ ಸಂಪ್ರದಾಯ.

ಶ್ರೀ ವಾಟಾಳ್ ನಾಗರಾಜ್: ಅಧಿಕಾರಿಗಳು ಬೇಕಾಗಿಲ್ಲ ಒಪ್ಪುತ್ತೇನೆ. ಆದರೆ ವಿರೋಧ ಪಕ್ಷದ ನಾಯಕರು ಮಾನ್ಯ ರಾಜ್ಯಪಾಲರ ಭಾಷಣವನ್ನು ಪ್ರಾರಂಭಮಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು ಉಪ ಮುಖ್ಯ ಮಂತ್ರಿಗಳು ಇರಬೇಕಾಗಿತ್ತು. 9 ಜನ ಮಂತ್ರಿಗಳಿದ್ದಾರೆ 4 ಜನ ಶಾಸಕರಿದ್ದಾರೆ. ನಿಮ್ಮ ಸರಕಾರ ಏನಾಗಿದೆ ಎಲ್ಲಿ ಹೋಗಿದೆ. ಸರಕಾರ ಇದೆಯೇ ಇಲ್ಲವೇ ಎಂದು ಸಂಶಯ ಬರುತ್ತಿದೆ. ನಿಮ್ಮಲ್ಲಿ ಏನಾದರೂ ಡಿಫೆರೆನ್ಸ್ ಬಂದಿದೆಯೇ? ಮಾನ್ಯ ಸಿಂಧ್ಯರವರೇ ತಾವು ಇಲ್ಲಿ ಇದ್ದಾಗ ಏನು ಮಾಡುತ್ತಿದ್ದಿರಿ.

ಶ್ರೀ ಪಿ.ಜಿ.ಆರ್ ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ; ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ಇತರೆ ಸದಸ್ಯರು ವಿರೋಧ ಪಕ್ಷದ ನಾಯಕರು ಹೇಳಿರತಕ್ಕಂತಹ ವಿಚಾರದಲ್ಲಿ ಸತ್ವ ಇಲ್ಲವೆಂದು ಹೇಳುವುದಿಲ್ಲ. ಸತ್ವ ಇದೆ. ವಿರೋಧ ಪಕ್ಷದಲ್ಲಿ ತಾವು ಈ ಕಡೆ ಕೂತಾಗ ಏನು

ಮಾತನಾಡುತ್ತಿದ್ದೀರಿ ಎಂದು ಕೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು, ಮಂತ್ರಿಗಳು ಮತ್ತು ಆಡಳಿತ ಪಕ್ಷದ ಸದಸ್ಯರು ಇದ್ದಾರೆ ಅದಕ್ಕೊಂದು ರೂಪ ಬರತಕ್ಕಂಥದ್ದು ವಿಧಾನ ಸಭೆಯಲ್ಲಿ ಚರ್ಚೆಯಾದಂತಹ ಸಂದರ್ಭದಲ್ಲಿ ಆ ಚರ್ಚೆಗೆ ಸತ್ವ ಬರಬೇಕಾದರೆ ನಾವೆಲ್ಲರೂ ಕೂಡ ಭಾಗವಹಿಸಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಜವಾಬ್ದಾರಿಯಿರುವ ಸಚಿವ ಸಂಪುಟದ ಸದಸ್ಯರುಗಳು ಮುಖ್ಯ ಮಂತ್ರಿಗಳು ನಾವೆಲ್ಲ ಇಲ್ಲಿ ಇರಬೇಕು. ಮಾನ್ಯ ಮುಖ್ಯ ಮಂತ್ರಿಗಳು ಕೆಲವೇ ಕ್ಷಣಗಳಲ್ಲಿ ಬರುತ್ತಾರೆ. ಅವರೇ ಉತ್ತರ ಕೊಡುತ್ತಾರೆ. ತಾವು ಭಾಷಣವನ್ನು ಪ್ರಾರಂಭ ಮಾಡಬೇಕೆಂದು ಮಾನ್ಯ ಖರ್ಗೆಯವರಲ್ಲಿ ಮನವಿ ಮಾಡುತ್ತೇನೆ. ಮಾನ್ಯ ನಾಗರಾಜ್‌ರವರು ಸರಕಾರಕ್ಕೆ ಏನಾಗಿದೆ ಅಭಿನ್ನಾಭಿಪ್ರಾಯ ಬಂದಿದೆ ಎಂದು ಹೇಳಿದರು ಆ ರೀತಿ ಇಲ್ಲ. ನಮ್ಮಲ್ಲಿ ಬಹಳ ಒಗ್ಗಟ್ಟು ಇದೆ ಈಗ ಇನ್ನೂ ಸ್ವಲ್ಪ ಜಾಸ್ತಿಯಾಗಿದೆ ಸರಕಾರ ಬಿಗಿಯಾಗಿದೆ ಬಂಡೆಯ ಹಾಗೆ ಇದೆ. ತಾವು ಯೋಚನೆ ಮಾಡುವ ಅವಶ್ಯಕತೆ ಇಲ್ಲ. ನನ್ನ ಮುಖ ನೋಡಿದರೆ ಗೊತ್ತಾಗುವುದಿಲ್ಲವೇ?

ಶ್ರೀ ಜಿ.ಎ. ಶ್ರೀರಾಮರೆಡ್ಡಿ: ಹಿಂದೆ ಸಿಂಧ್ಯರವರ ಒಗ್ಗಟ್ಟು ಕಡಿಮೆ ಇತ್ತು ಈಗ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಅಂದರೆ ಹಿಂದೆ ಒಗ್ಗಟ್ಟು ಕಡಿಮೆ ಇತ್ತೇ?

ಉಪಾಧ್ಯಕ್ಷರು: ಮಾನ್ಯ ಸಿಂಧ್ಯಾರವರು ಹೇಳಿದ್ದಾರೆ ಬರುತ್ತಾರೆಂದು...

ಶ್ರೀ ಎಲ್. ಆರ್. ಶಿವರಾಮೇಗೌಡ: ಅವರು ಇಲ್ಲಿ ಕೂತಿದ್ದಾಗಲೂ ಇದೇ ಪ್ರಶ್ನೆ ಇದೇ ತಲೆ ನೋವು ಇತ್ತು. ಮಾನ್ಯ ಸಿಂಧ್ಯರವರು ಒಪ್ಪಿಕೊಂಡಿರುವ ಹಾಗೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಗೆ ಬರಬೇಕಾಗಿರುವುದು ಸಹಜ. ಇಲ್ಲಿಗೆ ಇದನ್ನು ಕ್ಲೋಸ್ ಮಾಡಿ ಸಭೆ ಮುಂದುವರಿಸಬಹುದು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಶಿವರಾಮೇಗೌಡರು ಯಾವುದೇ ಸರಕಾರ ಬರಲಿ ಅವರು ಗೆದ್ದಾಗ ಆ ಸರಕಾರಕ್ಕೆ ಬೆಂಬಲ ಕೊಡುತ್ತಾರೆ. ಹೋದ ಸಲ ಕಾಂಗ್ರೆಸ್ ಸರಕಾರದ ಪರವಾಗಿ ಇದ್ದರು. ನಾಳೆ ನನ್ನ ಸರಕಾರ ಬಂದರೆ ನನ್ನ ಪರವಾಗಿ ಇರುತ್ತಾರೆ. ಆ ಪ್ರಶ್ನೆ ಬೇರೆ.. ಅದು ಅವರ ನೀತಿ.

ಉಪಾಧ್ಯಕ್ಷರು: ವಾಟಾಳ್ ನಾಗರಾಜ್‌ರವರೇ, ಅವರು ಮಾತನಾಡುವುದಕ್ಕೆ ಶುರು ಮಾಡಲಿ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಮಾತನಾಡುವುದಕ್ಕೆ ಒಂದು ಗೌರವ ಬೇಡವೇ? ತಾವೇ ಹೇಳಿ. ಈ ಸಭೆಯಲ್ಲಿ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಇದೇ ಸದನ ಅವರ ಪಕ್ಷದವರು ಬೆಳಿಗ್ಗೆ ತಾನೇ ಅವರು ಜನತಾದಳ ಪಕ್ಷದ ಸಭೆ ಸೇರಿದೆ. ಅಲ್ಲಿ ಏನಾಗಿದೆಯೋ ನನಗಂತೂ ಗೊತ್ತಿಲ್ಲ ಆ ರೀತಿ ಏನಾದರೂ ನಿಮ್ಮಲ್ಲಿ ಬಡಕಾಗಿ ಏನಾದರೂ ಆಗಿದೆಯೇ? ನಿಮಗೆ ಬಡಕು ಆಗಬೇಕು ಎಂದು ಭಾವಿಸುವನಲ್ಲ. ನಿಮ್ಮ ಸರ್ಕಾರ ಬದುಕಬೇಕು. ನಾನು ಪ್ರಜಾಪ್ರಭುತ್ವದ ವಿರೋಧಿಯಲ್ಲ. ಅದನ್ನಾದರೂ ಈ ಸದನದ ಮುಂದೆ ಹೇಳಿದರೆ ಬಹಳ ಒಳ್ಳೆಯದು.

ಶ್ರೀ ಪಿ.ಜಿ.ಆರ್ ಸಿಂಧ್ಯಾ: ಆ ರೀತಿಯ ಯಾವುದೇ ಚರ್ಚೆಯಾಗಿಲ್ಲ. ಆ ರೀತಿ ಆಗುವುದಕ್ಕೂ ಅವಕಾಶವೂ ಇಲ್ಲ. ನಾನು ಮುಂಚೆಯೇ ಹೇಳಿದೆ ನಮ್ಮಪಕ್ಷದಲ್ಲಿ ಮುಂಚಿಗಿಂತಲೂ ಹೆಚ್ಚಿನ ಒಗ್ಗಟ್ಟು ಇದೆ.

ಶ್ರೀ ವಾಟಾಳ್ ನಾಗರಾಜ್: ರಾಮನಗರದ್ದು ಆದಮೇಲೆಯೇ?

ಶ್ರೀ ಪಿ.ಜಿ.ಆರ್ ಸಿಂಧ್ಯಾ: ಇದರ ಬಗ್ಗೆ ಚಿಂತೆ ಮಾಡಬೇಡಿ. ಇವರು ನಮ್ಮ ಬಗ್ಗೆ ಸಹಾನುಭೂತಿ ಇರುವವರು. ಮಾನ್ಯ ಖರ್ಗೆಯವರು ಮಾತನಾಡಲಿ. ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಸರ್ಕಾರ ಆದಾಗೆ ಬಿದ್ದು ಹೋದರೆ ನಾನೇನು ಮಾಡಲಿ. ನಿಮ್ಮ ಸರ್ಕಾರ ಹೋಗಲಿ ಎಂದು ಹೇಳಿ ನಾನು ಭಾವಿಸುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ: ನಾನು ಶೂನ್ಯವೇಳೆಯಲ್ಲಿ ಒಂದು ಪ್ರಶ್ನೆಯನ್ನು ಎತ್ತಿದೆ ಅದಕ್ಕೆ ಉತ್ತರಕೊಡುತ್ತೇನೆಂದು ಹೇಳಿದ್ದರು.

ಉಪಾಧ್ಯಕ್ಷರು: ನಂತರ ಕೊಡಿಸುತ್ತೇವೆ. ದಯಮಾಡಿ ತಾವು ಕೂಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೇ, ಈ ಸದನಕ್ಕೆ ಬಂದು ಮಾರ್ಚ್ 10ನೇ ತಾರೀಖು ಬಂದರೆ 25 ವರ್ಷ ಆಗುತ್ತದೆ. ಮಾನ್ಯ ಭೈರೇಗೌಡರು ಹೇಳಿದರು. ಅಧಿಕಾರಿಗಳು ಇರಬೇಕು ಎಂದು ಯಾವುದೇ ಒಂದು ಕಾನೂನಿನಲ್ಲಿ ಅಥವಾ ಬಿಸೆನೆಸ್ ಟ್ರಾನ್ಸಾಕ್ಷನ್‌ನ ರೂಲ್ಸ್ ಇಲ್ಲ. ಇದಕ್ಕೆ ಅವರು ಬರುವ ಅವಶ್ಯಕ ಇಲ್ಲ. ಒಪ್ಪೋಣ. ಅವರು ಬೇಕಾಗಿಲ್ಲ ಸರಿ. ಆದರೆ ನಾವು ಇಲಾಖೆಯ ಮೇಲೆ ಮಾತನಾಡುವಾಗ ಎಲ್ಲಾ ಮಂತ್ರಿಗಳು ಹಾಜರು ಇರುತ್ತಾರಾ? ಹೌಸಿಂಗ್ ಮೇಲೆ ಮಾತನಾಡುತ್ತೇವೆ. ಪಿಡಬ್ಲ್ಯೂಡಿ ಲೋಕೋಪಯೋಗಿ ಇಲಾಖೆ ಮೇಲೆ ಮಾತನಾಡುತ್ತೇವೆ. ಪವರ್ ಮೇಲೆ ಮಾತನಾಡುತ್ತೇವೆ. ಈ ವಿಷಯದ ಬಗ್ಗೆ ಮಾತನಾಡಬೇಕಾದರೆ ಇಲ್ಲಾ ಸಂಬಂಧಪಟ್ಟ ಮಂತ್ರಿಗಳು ಇದ್ದು ಅದನ್ನು ನೋಟ್ ಮಾಡಿಕೊಂಡು ತಮ್ಮ ಉತ್ತರದಲ್ಲಿ ಏನು ಹೇಳಬೇಕೋ ಅದನ್ನು ಹೇಳಬಹುದು. ನಾನು ನೋಡಿದ್ದು ಹಿಂದೆಯೆಲ್ಲಾ ಅನೇಕ ಸಾರಿ ಮುಖ್ಯ ಕಾರ್ಯದರ್ಶಿಗಳು ಮತ್ತು ಫೈನಾನ್ಸ್ ಸೆಕ್ರಟರಿ ಮತ್ತು ಸಂಬಂಧಪಟ್ಟ ಎಲ್ಲಾ ಕಾರ್ಯದರ್ಶಿಗಳು ಇರುತ್ತಿದ್ದರು ಅದರಲ್ಲಿ ಯಾರೋ ಒಬ್ಬರು ಇಬ್ಬರು ಹೋದರೂ ಕೂಡ ಅವರ ಜಾಯಿಂಟ್ ಸೆಕ್ರೆಟರಿ ಅಟೆಂಡರ್ ಆಗಿರುವವರು. ಮಂತ್ರಿಗಳು ಯಾರು ಹೋದರು ಕೂಡ ನನ್ನ ಇಲಾಖೆಯ ಬಗ್ಗೆ ಏನಾದರೂ ಬಂದರೆ ನೀವು ಬರೆದುಕೊಳ್ಳಿ ಎಂದು ಹೇಳಿ ತಮ್ಮಲ್ಲಿರುವ ಒಂದು ನೋಟ್ ಪುಸ್ತಕವನ್ನು ಕೊಟ್ಟು ಹೋಗುವವರು. ಆದರೆ ಆಡಳಿತ ನಡೆದುಕೊಂಡು ಬಂದಿದೆ ಕಾನೂನಿನಲ್ಲಿ ಹೇಳಲಿಕ್ಕಿಲ್ಲ ಅಥವಾ ರೂಲ್ಸ್‌ನಲ್ಲಿ ಬರೆಯದೆ ಇರಬಹುದು. ಆದರೆ ಇವತ್ತಿನ ದಿವಸ ಇಷ್ಟು ಈ ಒಂದು ಸದನಕ್ಕೆ ಅಗೌರವ ತರುವ ರೀತಿಯಲ್ಲಿ ಸರ್ಕಾರ ವರ್ತನೆ ಮಾಡಿದರೆ ನಾನಂತೂ ಮಾತನಾಡುವುದಕ್ಕೆ ತಯಾರು ಇಲ್ಲ. ಅವರು ಬಂದಮೇಲೆ ಮಾತನಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಉಪಾಧ್ಯಕ್ಷರೇ ಒಂದು ಸಾರಿ ಪ್ರಾರಂಭವಾದ ಮೇಲೆ ಈ ರೀತಿ ಮಾಡಿದರೆ ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ಅವರು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಬರಬೇಕು. ಮತ್ತೊಮ್ಮೆ ಅವರ ಮನಸ್ಸನ್ನು ಒಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ದಯಮಾಡಿ ಖರ್ಗೆಯವರು ಪ್ರಾರಂಭ ಮಾಡಲಿ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ಅನೇಕ ಸಂದರ್ಭಗಳಲ್ಲಿ ಈ ರೀತಿ ಆಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಅಡ್ಜರ್ನ್ ಮಾಡಿದ್ದು 2 ಗಂಟೆಗೆ. ಈಗ 3-30 ಗಂಟೆ ಆಗಿದೆ. ನಮಗೇನು ಕೆಲಸ ಇರುವುದಿಲ್ಲವೇ? ಮುಂಜಾನೆ 10 ಗಂಟೆಗೆ ಬಂದು ಆರೇಳುಗಂಟೆಯವರಿಗೂ ಇರುವುದಿಲ್ಲವೇ? ರಾಜ್ಯಪಾಲರ ಭಾಷಣ ಇವತ್ತು ಪ್ರಾರಂಭ ಮಾಡುತ್ತಿದ್ದೇವೆ. ಮಧ್ಯದಲ್ಲಿ ಬಂದು ಯಾರೋ ಕರೆದಾಗ ಮಾತನಾಡುವಾಗ ಹೋಗಿದ್ದಾರೆ ಎಂದರೆ ಅದು ಬೇರೆ. ಪ್ರಾರಂಭದಲ್ಲೇ ಇಲ್ಲ ಎಂದರೆ ಯಾರು ಇದನ್ನು ಕೇಳುವವರೇ ಇಲ್ಲ ಎಂದರೆ ನಾವು ಯಾರಿಗೆ ಹೇಳುವುದು?

ಶ್ರೀ ಪಿ.ಜಿ. ಆರ್. ಸಿಂಧ್ಯಾ: ನಾವೆಲ್ಲ ಕೇಳುವುದಕ್ಕೆ ಇದ್ದೇವೆ ಸ್ವಾಮಿ. ನೀರು ಪ್ರಾರಂಭ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಅವರು ಪ್ರಾರಂಭ ಮಾಡುವುದು ಗೌರವ ತರುವುದಿಲ್ಲ ನಾನು ತಮಗೆ ಹೇಳುತ್ತೇನೆ. ಸದನವನ್ನು ಬೇಕಾದರೆ ಮುಂದಕ್ಕೆ ಹಾಕಿ. ಇದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಸಭೆಗೆ ಬರಲಿ.

ಶ್ರೀ ಪಿ.ಜಿ. ಆರ್. ಸಿಂಧ್ಯಾ: ಸರ್ಕಾರದ ಕೆಲಸಗಳು ಇರುತ್ತವೆ. ಮುಖ್ಯ ಮಂತ್ರಿಗಳು ಎಲ್ಲಾ ಸಂದರ್ಭದಲ್ಲಿಯೂ ಇರಲಿಕ್ಕಾಗುವುದಿಲ್ಲ. ಯಾವುದೇ ಮುಖ್ಯ ಮಂತ್ರಿಗಳೂ ಸಹಿತ ಎಲ್ಲಾ ಸಂದರ್ಭದಲ್ಲಿ ಇರುವ ಉದಾಹರಣೆಗಳು ಇಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದೊಂದು ಒಳ್ಳೆಯ ಸಂಪ್ರದಾಯ. ಮಾನ್ಯ ವಿರೋಧಪಕ್ಷದ ನಾಯಕರು ಪ್ರಮುಖ ಪಕ್ಷಗಳ ಜವಾಬ್ದಾರಿ ಇರುವ ಎಲ್ಲಾ ಸದಸ್ಯರುಗಳು ಮಾತನಾಡುವ ಸಂದರ್ಭದಲ್ಲಿ ಅದಷ್ಟು ಇರಬೇಕೆನ್ನುವುದನ್ನು ಸರ್ಕಾರ ಒಪ್ಪುತ್ತದೆ. ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಇದೊಂದು ಪ್ರತಿಷ್ಠೆಯ ಪ್ರಶ್ನೆ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಸದನದ ಗೌರವದ ಪ್ರಶ್ನೆ. ಏನು ಪ್ರತಿಷ್ಠೆ.

ಶ್ರೀ ಹೆಚ್. ಎನ್. ನಂಜೇಗೌಡ: ಮಾನ್ಯ ಉಪಾಧ್ಯಕ್ಷರೇ ಒಂದು ಕೆಲಸ ಮಾಡೋಣ ತಾವು ಪರ್ಮಿಷನ್ ಕೊಟ್ಟರೆ ಕ್ಲೋಷರ್ ಮೋಷನ್ ಮೂವ್ ಮಾಡಿಬಿಡೋಣ. ಮಕ್ಕಳಾಟ ಕೆಟ್ಟು ಹೋಯಿತೆ ಇದು ಏನು ಮಾತನಾಡುತ್ತೀರಿ ನೀವು? 12 ಜನ ಕುಳಿತು ಕೊಳ್ಳುತ್ತೀರಿ ನೀವು. ಈ ಮಾತನ್ನು ನಾನು ವಿಷಾಧದಿಂದ ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ತಾವೇ ಈ ರೀತಿ ಹೇಳಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ನೀವು ಬೈರೇಗೌಡರು ಈ ಕಡೆ ಇದ್ದವರು. ಬೈರೆಗೌಡರು ಒಂದು ಸಾರಿ ಎದ್ದರೆ ಒಂದೂವರೆ ಸಾರಿ ಹೇಳುತ್ತಿದ್ದಿರಿ. ಹೇಳಿ.

ಉಪಾಧ್ಯಕ್ಷರು: ಮಾನ್ಯ ಸಿಂಧ್ಯಾರವರು ಹೇಳುತ್ತಿದ್ದಾರೆ, ಅವರು ಹಿರಿಯ ಸಚಿವರು ಇದ್ದಾರೆ, ಮಾನ್ಯ ಬೈರೇಗೌಡರು ಇದ್ದಾರೆ. ನೋಟ್ಸ್ ಮಾಡಿಕೊಳ್ಳುತ್ತಾರೆ. ಅವರು ಬಂದ ಕೂಡಲೇ ಹೇಳುತ್ತಾರೆ. ಇಲ್ಲಿ ಹೊಸ ಸಂಪ್ರದಾಯವನ್ನು ಹಾಕುವುದು ಬೇಡ.

ಶ್ರೀ ವಾಟಾಳ್ ನಾಗರಾಜ್: ಇದು ಹೊಸ ಸಂಪ್ರಾದಾಯವಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪ್ರಾರಂಭದಲ್ಲಿಯೇ ಇಲ್ಲ ಎಂದರೆ ಹೇಗೆ? ಏನು ಮಾಡುವುದು? ಮುಖ್ಯ ಕಾರ್ಯದರ್ಶಿಗಳೂ ಕೂಡ ಬರುವುದಿಲ್ಲ ಯಾವ ಸೆಕ್ರಟರಿಗಳು ಬರುವುದಿಲ್ಲ ಫೈನಾನ್ಸ್ ಸೆಕ್ರೆಟರಿ ಇಲ್ಲ.

ಉಪಾಧ್ಯಕ್ಷರು: ದಯಮಾಡಿ ಪ್ರಾರಂಭ ಮಾಡಿ ಬರುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಅದೇಗೆ ಪ್ರಾರಂಭ ಮಾಡುತ್ತಾರೆ? ಅವಿಶ್ವಾಸ ನಿರ್ಣಯವನ್ನು ಮಂಡಿಸೋಣವೇ ಸ್ವಾಮಿ? ತಾವು ಅವಕಾಶ ಕೊಟ್ಟರೆ ಮಂಡಿಸುತ್ತೇವೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ: ಮಂಡಿಸುವುದಿದ್ದರೆ ಮಂಡಿಸಿ. ನಮ್ಮ ತಾಕರಾರೇನೂ ಇಲ್ಲ. ಅವಿಶ್ವಾಸ ನಿರ್ಣಯ ಮಾಡಿಸುವುದಕ್ಕೆ ನಮ್ಮ ತಕರಾರೇನೂ ಇಲ್ಲ. ನಮ್ಮ ಶಾಸಕಾಂಗ ಪಕ್ಷ ಗಟ್ಟಿಯಾಗಿ ಒಗ್ಗಟ್ಟಿನಿಂದ ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಇವರ ಸರ್ಕಾರ ಬಿದ್ದುಹೋಗಬೇಕು ಎಂದು ಬಯಸುವವರಲ್ಲಿ. ಒಂದು ಎಚ್ಚರಿಕೆ ಕೊಡುತ್ತಿದ್ದೇವೆ. ಈ ಎಚ್ಚರಿಕೆ ಒಂದಲ್ಲ ಎರಡಲ್ಲ, ಪ್ರತಿವರ್ಷ ಇದೇ ಆಗಿದೆ.

ಉಪಾಧ್ಯಕ್ಷರು: ಎಂಟತ್ತು ಸಚಿವರು ಇದ್ದಾರೆ. ಅವರು ಮಾತನಾಡುವುದಕ್ಕೆ ಪ್ರಾರಂಭ ಮಾಡಲಿ. ಸಚೇತಕರು ಹೋಗಿದ್ದಾರೆ. ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಫೈನಾನ್ಸ್ ಮಿನಿಸ್ಟರ್ ಇಲ್ಲ ಈ ಕಾರ್ಯಕ್ರಮ ಕೊಟ್ಟವರು ಯಾರು? ತಾವು ಈಗ ಪ್ರಾರಂಭ ಮಾಡಿ ಎಂದು ಹೇಳುವುದು ಹೊಸ ಸಂಪ್ರದಾಯವಾಗುತ್ತದೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ: ಆ ಕಡೆ ಇದ್ದಾಗ ನಾವು ಸಹಕಾರ ಕೊಟ್ಟಿಲ್ಲವೇ?

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್: ನಾವು ನೋಡಿದ್ದೇವೆ ಸ್ವಾಮಿ ಇಲ್ಲಿದ್ದಾಗ ಯಾವ ರೀತಿ ಮಾತನಾಡುತ್ತಿದ್ದೀರಿ ಎಂದು.

ಶ್ರೀ ವಾಟಾಳ್ ನಾಗರಾಜ್: ಅಧಿಕಾರಿಗಳು ಇಲ್ಲ. ಸರ್ಕಾರ ಇಲ್ಲ ಎಂದರೆ ನಾವು ಏತಕ್ಕೆ ಕಾಯಬೇಕು? ಈ ಸಭೆಯನ್ನು ಮುಂದಕ್ಕೆ ಹಾಕಿ. ನಾನಂತೂ ಧರಣಿ ಮಾಡುತ್ತೇನೆ.

ಶ್ರೀ ಪಿ. ಬೈರೇಗೌಡ: ಹಿಂದೆ ಅನೇಕ ಸಾರಿ ಈ ರೀತಿ ನಡೆದಿದೆ. ನಾವು ವಿರೋಧ ಪಕ್ಷದಲ್ಲಿ ಇದ್ದಂತಹ ಸಂದರ್ಭದಲ್ಲಿ ಈ ತರಹ ನಡೆದಿದೆ ಆಗ ನಾವೂ ಕೂಡ ಸಹಕರಿಸಿದ್ದೇವೆ. ಅದೇ ರೀತಿ ಸಹಕಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷದವರು ಈಗ ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಇರಬೇಕು. ಮಾನ್ಯ ಹಣಕಾಸಿನ ಮಂತ್ರಿಗಳು ಇರಬೇಕು ಅದು ವಿರೋಧ ಪಕ್ಷದವರಿಗೆ ನೀಡಿರುವ ಸವಲತ್ತು ಹಾಗಾದರೆ ವಿರೋಧ ಪಕ್ಷದ ನಾಯಕರು ಎಂದು ರೆಕಾಗ್ನೈಸ್ ಮಾಡಬೇಡ ನಾನು ಹಾಗೆಯೇ ಮಾತನಾಡುತ್ತೇನೆ. ನಿಮ್ಮ ಕೈಯಲ್ಲಿ ರೆಕಾಗ್ನೈಸ್ ಕೊಡುವುದು ಇದ್ದರೆ ಅದನ್ನು ವಾಪಸ್ ತೆಗೆದುಕೊಂಡು ಬಿಡಿ.

ಶ್ರೀ ಪಿ. ಬೈರೇಗೌಡ: ನಿಮ್ಮ ಮಾತಿಗೆ ನಮ್ಮ ಸಹಮತಿ ಇದೆ. ಮಾನ್ಯ ವಿರೋಧ ಪಕ್ಷ ನಾಯಕರು ಮಾತನಾಡುವಾಗ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕು. ಅವರು ಬರುತ್ತಾರೆ. ಅವರು ಐದು ಹತ್ತು ನಿಮಿಷದಲ್ಲಿ ಬರುವವರು ಇದ್ದಾರೆ. ಅದಕ್ಕಾಗಿ ದಯಮಾಡಿ ಸಹಕರಿಸಬೇಕು ಎಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ: ನಿಮಗೆ ಏನಾದರೂ ಸಮಸ್ಯೆ ಇದ್ದರೆ ನಾವು ಸಹಕಾರ ಕೊಡುವುದಕ್ಕೆ ತಯಾರು ಇದ್ದೇವೆ.

(ಗೊಂದಲ)

ಶ್ರೀ ಎಲ್. ಆರ್. ಶ್ರೀರಾಮಗೌಡ: ಇಂತಹ ಸಮಸ್ಯೆಗಳು ಹಲವು ಸಾರಿ ಬಂದಿದೆ.

(ಗೊಂದಲ)

ಉಪಾಧ್ಯಕ್ಷರು: 8-10 ಮಂತ್ರಿಗಳು ಇದ್ದಾರೆ. ತಾವು ಮಾತನಾಡಿ ಮುಖ್ಯಮಂತ್ರಿಗಳಿಗೆ ಹೇಳಿ ಕಳುಹಿಸಿದ್ದಾರೆ. ಅವರು ಬರುತ್ತಾರೆ. ಎಲ್ಲರೂ ಮಾತನಾಡಲು ಹೊರಟರೆ ಕೇಳುವುದು ಹೇಗೆ?

ಶ್ರೀ ಎಲ್.ಆರ್. ಶಿವರಾಮೇಗೌಡ: ಮಾನ್ಯ ಉಪಾಧ್ಯಕ್ಷರೆ, ಇಂತಹ ಸಮಸ್ಯೆಗಳು ನೂರಾರು ಸಾರಿ ಈ ಸದನದಲ್ಲಿ ಬಂದಿದೆ.

(ಗೊಂದಲ)

ಶ್ರೀ ಪಿ.ಜಿ. ಆರ್. ಸಿಂಧ್ಯಾ: ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ, ಮಾನ್ಯ ಅರ್ಥ ಸಚಿವರು ಬರುತ್ತಾರೆ. ತಾವು ಪ್ರಾರಂಭ ಮಾಡಿ. ತಾವು ಹೇಳುವುದನ್ನು ನಾವು ಬರೆದು ಕೊಳ್ಳುತ್ತೇವೆ.

ಉಪಾಧ್ಯಕ್ಷರು: ಈಗ 8-10 ಮಂತ್ರಿಗಳು ಇದ್ದಾರೆ. ಮುಖ್ಯಮಂತ್ರಿಗಳಿಗೆ ಹೇಳಿ ಕಳುಹಿಸಿದ್ದಾರೆ, ಬರುತ್ತಾರೆ, ತಾವು ಪ್ರಾರಂಭ ಮಾಡಿ. ಆ ತರಹ ತಾವು ಎಲ್ಲಾ ಎದ್ದರೆ ಮಾತನಾಡುವುದಕ್ಕೆ ಆಗುತ್ತದಾ? ಮಾನ್ಯ ಸೋಮಶೇಖರ ಹೇಳುವುದನ್ನು ಕೇಳೋಣ.

ಶ್ರೀ ಬಿ. ಸೋಮಶೇಖರ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಹಿರಿಯ ಸಚಿವರು. ಅನೇಕ ಬಾರಿ ಮಂತ್ರಿಗಳಾಗಿದ್ದಾರೆ. ಅನೇಕ ಇಲಾಖೆಗಳನ್ನು ನಡೆಸಿದ್ದಾರೆ. ಅವರ ಸ್ಥಾನಕ್ಕೆ ಅಗೌರವ ತರತಕ್ಕಂತೆ ನಾವು ನಡೆದುಕೊಳ್ಳುತ್ತೇವೆ ಎಂಬ ಭಾವನೆ ಮಾಡಿಕೊಳ್ಳಬಾರದು. ಇಂತಹ ಸನ್ನಿವೇಶ ಎಲ್ಲಾ ಸರ್ಕಾರಗಳಿಗೂ ಬರುತ್ತವೆ. ನಾವು ಈ ರೀತಿ ಉದ್ದೇಶಪೂರ್ವಕವಾಗಿ ಮಾಡುವುದಿಲ್ಲ. ಆದರೆ ಮಾನ್ಯ ಖರ್ಗೆಯವರಿಗೆ ನಾವು ಮನವಿ ಮಾಡಿಕೊಳ್ಳುತ್ತೇವೆ. ಅವರು ಏನು ಮಾತನಾಡುತ್ತಾರೆ ಅದನ್ನೆಲ್ಲಾ ನಾವು ಬರೆದುಕೊಳ್ಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಕೂಡಿಸುತ್ತೇವೆ. ನಾವು ಬರೆದುಕೊಳ್ಳುತ್ತಿದ್ದೇವೆ. ಆದ್ದರಿಂದ ಅವರು ಇದನ್ನು ಪ್ರತಿಷ್ಟೆಯಾಗಿ ತೆಗೆದುಕೊಳ್ಳಬಾರದು ಅವರು ಭಾಷಾ ಪ್ರಾರಂಭ ಮಾಡಿದರೆ ಅವರು ಏನೇನು ವಿಚಾರಗಳನ್ನು ಹೇಳುತ್ತಾರೆ, ಅದಕ್ಕೆ ಉತ್ತರವನ್ನು ಕೊಡಿಸುತ್ತೇವೆ. ಅವರಿಗೂ ಈ ತರಹ ಸನ್ನಿವೇಶ ಬಂದಿದೆ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ತಾವು ದಯವಿಟ್ಟು ಕೂಡಿ.

ಶ್ರೀ ಪಿ.ಜಿ. ಆರ್. ಸಿಂಧ್ಯಾ: ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇರಬೇಕು. ನಾವು 9-10 ಜನ ಮಂತ್ರಿಗಳು ಇದ್ದೇವೆ. ಐದು ನಿಮಿಷ ತಡವಾಗಿ ಬರುತ್ತಾರೆ. ನಾವು ಅವರಿಗೆ ಅಗೌರವ ಕೊಡಬೇಕು ಎನ್ನುವ ಪ್ರಶ್ನೆಯೇ ಇಲ್ಲ.

ಉಪಾಧ್ಯಕ್ಷರು: ಎಲ್ಲಾ ಮಂತ್ರಿಗಳಿಗೂ ಸಂಯುಕ್ತ ಜವಾಬ್ದಾರಿಯುಕ್ತ ಜವಾಬ್ದಾರಿ ಇದೆ. ವಿರೋಧ ಪಕ್ಷದ ನಾಯಕರು ಮಾತನಾಡಿ.

ಶ್ರೀ ಜೆ. ಹೆಚ್. ಪಟೇಲ್: ನಾನು ಕುಳಿತುಕೊಳ್ಳುವ ಹಾಗೆ ತಾವು ಮಾತನಾಡಬೇಕು. ಸುಮ್ಮನೆ ಬಯ್ದುಕೊಂಡು ಹೋದರೆ ನಾನೇನು ಉತ್ತರ ಕೊಡುವುದಕ್ಕೆ ಆಗುತ್ತದೆ.

(6) ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ನಮಗೆ ಅಂತಹ ಎಂಟರ್‌ಟೇನ್‌ಮೆಂಟ್ ಕೊಡುವುದಕ್ಕೆ ಆಗಬೇಕಲ್ಲಾ. ಅದನ್ನು ಮಾನ್ಯ ನಂಜೇಗೌಡರು ಕೊಟ್ಟರೆ ಕೊಡಬಹುದು. ಸನ್ಮಾನ್ಯ ಉಪಾಧ್ಯಕ್ಷರೆ, ನಾವು ಈ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕು ಎಂದು ನಾನು ಸುಮಾರು ಒಂದೆರಡು ತಾಸಿನಿಂದ ಇಲ್ಲಿಯೇ ಕುಳಿತಿದ್ದೇನೆ.